ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 221/2019

ಸಿ. ಡಬ್ಲ್ಯು: 01
ಪಿ. ಡಬ್ಲ್ಯು: 01

ಸಾಕ್ಷಿದಾರರ ಹೆಸರು : ದಿನೇಶ್.ಎನ್
ತಂದೆ/ಪತಿಯ ಹೆಸರು : ನಾಗರಾಜು
ವಯಸ್ಸು : 34 ವರ್ಷ
ವೃತ್ತಿ : ಚಾಲಕ
ವಾಸ : ಬೆಳಗೊಳ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 03.06.2024

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನನಗೆ ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ. ನನಗೆ ಆರೋಪಿ ಪರಿಚಯವಿರುವುದಿಲ್ಲ. ನನಗೆ ಮೃತ ಕರ್ಪಮ್ಮ ರವರ ಪರಿಚಯವಿರುತ್ತದೆ. ಸದರಿ ಕರ್ಪಮ್ಮ ರವರು ಅಪಘಾತದಿಂದ ತೀರಿಕೊಂಡಿರುತ್ತಾರೆ. ಸದರಿ ಅಪಘಾತವು ನಮ್ಮ ಊರಾದ ಬೆಳಗೊಳದಲ್ಲಿ ಬಸ್ ನಿಲ್ದಾಣದಲ್ಲಿ ಆಗಿರುತ್ತದೆ. ಸದರಿ ಅಪಘಾತವು ದಿಃ 01.02.2019 ರಂದು ಮಧ್ಯಾಹ್ನ 12.30 ಗಂಟೆಗೆ ಆಗಿರುತ್ತದೆ. ಬೋಲೊರೋ ವಾಹನದ ಚಾಲಕನು ಮೈಸೂರು ಕಡೆಯಿಂದ ಅತಿವೇಗವಾಗಿ ಬರುತ್ತಿದ್ದು ಎಡಭಾಗದಲ್ಲಿ ಬೇಕರಿ ಮುಂದೆ ಕುಳಿತಿದ್ದ ನನ್ನ ಅಜ್ಜಿಗೆ ಗುದ್ದಿ ಅಪಘಾತ ಪಡಿಸಿರುತ್ತಾರೆ. ಬೋಲೋರೋ ವಾಹನದ ಸಂಃ 4072 ಆಗಿರುತ್ತದೆ. ಈ ಅಪಘಾತದಿಂದ ನನ್ನ ಅಜ್ಜಿಗೆ ಮೈ ಕೈಗೆ ಹಾಗೂ ತಲೆಗೆ ಪೆಟ್ಟಾಗಿರುತ್ತದೆ. ನಂತರ ನಮ್ಮ ಅಜ್ಜಿಯನ್ನು ಆಂಬ್ಯುಲೈನ್ಸ ನಲ್ಲಿ ಬೆಳಗೊಳದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋಗಿ ಅವರ ಮೊಮ್ಮಗನಾದ ರಾಜು ರವರಿಗೆ ಈ ವಿಚಾರವನ್ನು ತಿಳಿಸಿರುತ್ತೇನೆ. ನಂತರ ವೈದ್ಯರ ಸಲಹೆ ಮೇರೆಗೆ ಸದರಿ ಕರ್ಪಮ್ಮ ರವರನ್ನು ಮೈಸೂರಿನಲ್ಲಿರುವ ಕೆ.ಆರ್. ಹೆಚ್. ಆಸ್ಪತ್ರೆಗೆ ರಾಜು ರವರು ಕರೆದುಕೊಂಡು ಹೋಗಿರುತ್ತಾರೆ. ನಂತರ ರಾಜು ರವರು ನನಗೆ ಕರೆ ಮಾಡಿ ಕರ್ಪಮ್ಮ ರವರು ತೀರಿಕೊಂಡ ವಿಚಾರವನ್ನು ನನಗೆ ತಿಳಿಸಿರುತ್ತಾರೆ. ಈ ಘಟನೆ ಸಂಬಂಧ ನಾನು ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1-ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಂಜೆ 05.30 ಸಮಯದಲ್ಲಿ

ಪೋಲೀಸರು ಘಟನಾ ಸ್ಥಳಕ್ಕೆ ಬಂದಿದ್ದು ನಾನು ಪೋಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ ವಿಜಯಕುಮಾರ ಸಹ ಇದ್ದರು. ಪೋಲೀಸರು ಘಟನಾ ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿರುತ್ತಾರೆ ಹಾಗೂ ಫೋಟೋ ಸಹ ತೆಗೆದಿರುತ್ತಾರೆ. ನಾನು ಬೋಲೊರೋ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

ಈ ಅಪಘಾತವು ಬೋಲೊರೋ ವಾಹನ ಚಾಲಕನಿಂದ ಆಗಿರುತ್ತದೆ. ಬೊಲೊರೋ ವಾಹನದ ಚಾಲಕನನ್ನುನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿದ್ದು ಸಾಕ್ಷಿಯು ಆರೋಪಿಯನ್ನು ನೋಡಿ ಇವರು ಬೋಲೊರೋ ವಾಹನದ ಚಾಲಕ ಅಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತೀಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು).

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ಮಹಜರ್ ಮಾಡುವ ಸಂದರ್ಭದಲ್ಲಿ ಚಾಸಾ.2 ಮತ್ತು 3 ರವರು ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಅಪಘಾತವನ್ನು ನ್ಯಾಯಾಲಯದ ಮುಂದಿರುವ ಆರೋಪಿಯೇ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆರೋಪಿಯನ್ನು ನೋಡಿರುವುದಿಲ್ಲವೆಂದು ನುಡಿಯುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.